**ಚಾಸಾಃ 42 ಫ್ರಾಸಾಃ 28**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸುಳ್ಯ, ದ.ಕ**

**ಸಿ.ಸಿ ಸಂಖ್ಯೆ:2/2022**

| | |
|---|---|
| ಹೆಸರು | :ಡಿ.ವಿ.ಮಲ್ಲೇಶಪ್ಪ |
| ತಂದೆಯ ಹೆಸರು | :ವರದೇಗೌಡ |
| ಪ್ರಾಯ | :63 ವರ್ಷ |
| ಉದ್ಯೋಗ | :ನಿವೃತ್ತ ಡಿ.ಡಿ.ಪಿ.ಐ |
| ವಾಸ | :ಹಾಸನ |

**ದಿನಾಂಕ 25.09.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ನಾನು ಡಿಸೆಂಬರ್ 2013 ರಿಂದ ಫೆಬ್ರವರಿ 2015 ರವರೆಗೆ ಸುಳ್ಯ ತಾಲೂಕು ಪಂಚಾಯಿತಿಯಲ್ಲಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

ದಿ. 21.8.2014ರಂದು ಸುಳ್ಯ ಪೊಲೀಸ್ ಠಾಣೆಯ ಪಿ.ಎಸ್.ಐ ರವರು ಪತ್ರ ಬರೆದು ಮರ್ಕಂಜ ಗ್ರಾಮ ಪಂಚಾಯಿತಿಯ ಕುರಿತು ಈ ಕೆಳಗಿನ ವಿವರಗಳನ್ನು ಕೇಳಿರುತ್ತಾರೆ.

ಶಿವರಾಮಗೌಡ ರವರು ಯಾವ ಸಮಯದಲ್ಲಿ ಮರ್ಕಂಜ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿದ್ದರು.

ಪ್ರೇಮ್ ಸಿಂಗ್ ರವರು ಯಾವ ಸಮಯದಲ್ಲಿ ಮರ್ಕಂಜ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿದ್ದರು,

ಕೇಶವ ಗೌಡರು ಯಾವ ಸಮಯದಲ್ಲಿ ಮರ್ಕಂಜ ಗ್ರಾಮ ಪಂಚಾಯಿತಿಯಲ್ಲಿ ಬಿಲ್ ಕಲೆಕ್ಟರ್ ಆಗಿ ಕೆಲಸ ಮಾಡುತ್ತಿದ್ದರು.

ರಾಮಚಂದ್ರ ರವರು ಯಾವ ಸಮಯದಲ್ಲಿ ಮರ್ಕಂಜ ಗ್ರಾಮ ಪಂಚಾಯಿತಿಯಲ್ಲಿ ಸದಸ್ಯರಾಗಿದ್ದರು.

ಮೇಲಿನಂತೆ ಸುಳ್ಯ ಪಿ.ಎಸ್.ಐ ರವರು ಕೇಳಿದ ಮಾಹಿತಿಯನ್ನು ನೀಡಲು ಗ್ರಾಮ ಪಂಚಾಯಿತಿಯಲ್ಲಿ ಯಾವುದೇ ದಾಖಲೆಗಳು ಲಭ್ಯವಿರಲಿಲ್ಲ ಕಾರಣ ಪೋಲಿಸರು ಜಪ್ತಿ ಮಾಡಿದ್ದರು. ನಾನು ದಿಃ 26.8.2014 ರಂದು ಲಿಖಿತವಾಗಿ ತಿಳಿಸಿರುತ್ತೇನೆ. ನಮಗೆ ಸಿಕ್ಕಿದ ಮಾಹಿತಿಯ ಆಧಾರದ ಮೇರೆಗೆ ನಾನು ಪೊಲೀಸರಿಗೆ ಮಾಹಿತಿಯನ್ನು ನೀಡಿರುತ್ತೇನೆ. ಅದರಂತೆ ಶಿವರಾಮಗೌರವರು 29.9.2007 ರಿಂದ 13.11.2010 ರವರಗೆ ಮರ್ಕಂಜ ಗ್ರಾಮ ಪಂಚಾಯಿತಿಯಲ್ಲಿ ಅಧ್ಯಕ್ಷರಾಗಿದ್ದರು.

ಪ್ರೇಮ್ ಸಿಂಗ್ ರವರು 13.11.2004 ರಿಂದ 13.11.2010 ರವರೆಗೆ ಮರ್ಕಂಜ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿರುತ್ತಾರೆ. ಅದರೆ ವರದಿಯಲ್ಲಿ ಕಣ್ತಪ್ಪಿನಿಂದ 2002 ಎಂದು ನಮೂದಿಸಲಾಗಿರುತ್ತದೆ.

ಕೇಶವಗೌಡರವರು ಮರ್ಕಂಜ ಗ್ರಾಮ ಪಂಚಾಯಿತಿಯಲ್ಲಿ ಯಾವ ಸಮಯದಿಂದ ಕರ್ತವ್ಯ ನಿರ್ವಹಿಸುತ್ತಿದ್ದರು ಎಂಬ ಬಗ್ಗೆ ಮಾಹಿತಿ ಲಭ್ಯವಿರಲಿಲ್ಲ, ಆದರೆ ಈ ಪ್ರಕರಣದ ನಡೆದ ಸಂದರ್ಭದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು.

ರಾಮಚಂದ್ರರವರು ಮರ್ಕಂಜ ಗ್ರಾಮ ಪಂಚಾಯಿತಿಯಲ್ಲಿ ಸದಸ್ಯರಾಗಿದ್ದ ಬಗ್ಗೆ ಯಾವುದೇ ದಾಖಲೆಗಳು ನಮ್ಮಲ್ಲಿ ಲಭ್ಯವಿರಲಿಲ್ಲ ಎಂದು ವರದಿ ನೀಡಿರುತ್ತೇನೆ. ನಾನು

ನೀಡಿದ್ದ ವರದಿಯನ್ನು ನೋಡುತ್ತಿದ್ದು, ಅದನ್ನು ನಿಪಿ–69 ಎಂದು, ಸಾಕ್ಷಿಯ ಸಹಿಯನ್ನು ನಿಪಿ–69(ಎ) ಎಂದು ಗುರುತಿಸಲಾಯಿತು.

ಪ್ರೇಮ್ ಸಿಂಗ್ ಎಂಬುವವರು ಪದೋನ್ನತಿ ಮೇರೆಗೆ ಮರ್ಕಂಜ ಗ್ರಾಮ ಪಂಚಾಯಿತಿಗೆ ನೇಮಕ ಆದ ಬಗ್ಗೆ ಆದೇಶದ ದೃಢೀಕೃತ ನಕಲನ್ನು ವರದಿಯ ಜೊತೆ ನೀಡಿರುತ್ತೇನೆ. ಅದನ್ನು ಈಗ ನೋಡಿ ಗುರುತಿಸುತ್ತೇನೆ. ಅದನ್ನು ನಿಪಿ–70 ಎಂದು, ಸಾಕ್ಷಿಯ ಸಹಿಯನ್ನು ನಿಪಿ–70(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1ನೇ ಆರೋಪಿ ಪರ ಶ್ರೀ ಎನ್.ಕೆ ವಕೀಲರಿಂದಃ**

ನಾನು ನಿಪಿ–69 ರಂತೆ ಮಾಹಿತಿ ನೀಡುವ ಮೊದಲು ಯಾವುದೇ ದೃಢೀಕೃತ ದಾಖಲೆಗಳನ್ನು ನೋಡಿರುವುದಿಲ್ಲ. ನಾನು 1ನೇ ಆರೋಪಿತರು ಅಧ್ಯಕ್ಷರಾಗಿದ್ದರು ಎಂಬ ಬಗ್ಗೆ ನೀಡಿದ ಮಾಹಿತಿ ತಪ್ಪು ಮಾಹಿತಿ ಎಂದರೆ ಸರಿಯಲ್ಲ.

(2 ಮತ್ತು 3ನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ)

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಸುಳ್ಯ